ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರಾರಂಭದಿಂದ 1995ರವರೆಗೆ ಖರ್ಚು ಮಾಡಿದ ಹಣವೆಷ್ಟು? ಅಂಕಿ ಅಂಶ ಸಹಿತ ಸವಿಸ್ತಾರ ವಿವರ ನೀಡುವುದು.

ಆ) 1995-96ನೇ ಸಾಲಿಗೆ ಸೀಮಿತವಾದಂತೆ ಬಿಡುಗಡೆ ಮಾಡಿದ ಮೊತ್ತವೆಷ್ಟು? ಹಾಗೂ 1996-97ನೇ ಸಾಲಿಗೆ ಸದರೀ ಯೋಜನೆಗೆ ನಿಗದಿಮಾಡಿದ ಹಣವೆಷ್ಟು (ವಿವರ ನೀಡುವುದು)

ಇ) ಸದರಿ ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಅಣೆಕಟ್ಟುಗಳಿಂದ ನೀರಾವರಿ ಹೊಂದುವ ಕ್ಷೇತ್ರವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):-

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರಾರಂಭದಿಂದ 1995 ಮಾರ್ಚ್ 31ರವರೆಗೆ ರೂ. 1351.69 ಕೋಟಿಗಳನ್ನು ಖರ್ಚು ಮಾಡಲಾಗಿದೆ. ವರ್ಷಾವಾರು ಪ್ರಗತಿಯನ್ನು ತೋರಿಸುವ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) 1995-96ನೇ ಸಾಲಿಗೆ ಸೀಮಿತವಾದಂತೆ ಬಿಡುಗಡೆ ಮಾಡಿದ ಮೊತ್ತ ರಾಜ್ಯ ಸರ್ಕಾರದಿಂದ ರೂ. 176.73 ಕೋಟಿ ಮತ್ತು ಕೃಷ್ಣ ಭಾಗ್ಯ ಜಲ ನಿಗಮದಿಂದ ರೂ. 189.13 ಕೋಟಿ. ಒಟ್ಟು 365.86 ಕೋಟಿ. 1996-97ನೇ ಸಾಲಿಗೆ ಸದರೀ ಯೋಜನೆಗೆ ರಾಜ್ಯ ಸರ್ಕಾರದಿಂದ ರೂ. 400 ಕೋಟಿಗಳನ್ನು ಮತ್ತು ಕೃಷ್ಣ ಭಾಗ್ಯ ಜಲ ನಿಗಮ (ನಿಯಮಿತ) ಇದರ ಮೂಲಕ ರೂ.600 ಕೋಟಿಗಳನ್ನು ಒಟ್ಟು ರೂ. 1000 ಕೋಟಿಗಳನ್ನು ನಿಗದಿ ಮಾಡಲಾಗಿದೆ.

ಇ) ಸದರಿ ಯೋಜನೆಯಿಂದ ನೀರಾವರಿ ಹೊಂದುವ ಕ್ಷೇತ್ರ 6.22 ಲಕ್ಷ ಹೆಕ್ಟೇರು. ತಾಲ್ಲೂಕುವಾರು ವಿವರ ಕೆಳಗಿನಂತಿದೆ.

1.	ಶೋರಾಪುರ	93200 ಹೆಕ್ಟೇರು
2.	ಶಹಪೂರ	93200 ಹೆಕ್ಟೇರು
3.	ಜೇವರ್ಗಿ	102200 ಹೆಕ್ಟೇರು
4.	ಸಿಂದಗಿ	125300 ಹೆಕ್ಟೇರು
5.	ಇಂಡಿ	36800 ಹೆಕ್ಟೇರು
6.	ಲಿಂಗಸೂಗೂರು	33675 ಹೆಕ್ಟೇರು
7.	ದೇವದುರ್ಗ	34440 ಹೆಕ್ಟೇರು
8.	ರಾಯಚೂರು	36120 ಹೆಕ್ಟೇರು

9.	ಬಿಜಾಪುರ	12365 ಹೆಕ್ಟೇರು
10.	ಬಾಗೇವಾಡಿ	16849 ಹೆಕ್ಟೇರು
11.	ಮುದ್ದೇಬಿಹಾಳ	16000 ಹೆಕ್ಟೇರು
12.	ಹುನಗುಂದ	6440 ಹೆಕ್ಟೇರು
13.	ಬಾಗಲಕೋಟೆ	9660 ಹೆಕ್ಟೇರು
14.	ಜಮಖಂಡಿ	5861 ಹೆಕ್ಟೇರು
	ಒಟ್ಟು	622120 ಹೆಕ್ಟೇರು

ಪ್ರಾರಂಭದಿಂದ 1994-95ರವರೆಗಿನ ವರ್ಷಾವಾರು ವೆಚ್ಚದ ಪಟ್ಟಿ

ಕ್ರಮ ಸಂಖ್ಯೆ	ವರ್ಷ	ಖರ್ಚು (ಲಕ್ಷ ರೂ.ಗಳಲ್ಲಿ)
1.	1967-68 ರವರೆಗೆ	226.91
2.	1968-69	81.85
3.	1969-70	230.56
4.	1970-71	437.60
5.	1971-72	398.92
6.	1972-73	198.49
7.	1973-74	211.69
8.	1974-75	224.80
9.	1975-76	203.84
10.	1976-77	520.82
11.	1977-78	1196.75
12.	1978-79	2462.34
13.	1979-80	3694.73
14.	1980-81	4019.34

15.	1981-82	4478.24
16.	1982-83	4087.60
17.	1983-84	4910.20
18.	1984-85	4134.98
19.	1985-86	4622.31
20.	1986-87	6000.00
21.	1987-88	4311.81
22.	1988-89	5056.52
23.	1989-90	5461.37
24.	1990-91	6459.29
25.	1991-92	6762.503
26.	1992-93	12755.96
27.	1993-94	24090.77
28.	1994-95	25156.32
	ಒಟ್ಟ ರೂ.	135169.603

ವಿಷಯ:- ರಾಜ್ಯದಲ್ಲಿ ಬಳಕೆದಾರರ ವೇದಿಕೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4471

ಶ್ರೀ ಯು.ಆರ್.ಸಭಾಪತಿ, ಎಂ.ಎಲ್.ಎ:- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ವಿವಿಧ ಬಳಕೆದಾರರ ವೇದಿಕೆಗಳು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಬಳಕೆದಾರರ ದೂರು ಪರಿಹಾರ ವೇದಿಕೆ ಎದುರು ಇತ್ಯರ್ಥಕ್ಕೆ ಬಾಕಿ ಇರುವ ಕೇಸುಗಳು (ದೂರು) ಎಷ್ಟು, ಕಾಯಿದೆ ಪ್ರಕಾರ ಎಷ್ಟು ದಿನಗಳಲ್ಲಿ ಕೇಸನ್ನು ಇತ್ಯರ್ಥಪಡಿಸಲಾಗುವುದು (ವಿವರ ನೀಡುವುದು)

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-